<u>ದಿನಾಂಕ **13.01.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ **3** ನೇ ಪ್ರತಿವಾದಿ ಪರ ಶ್ರೀ ಬಿ ಎಲ್ ಎ ವಕೀಲರಿಂದಃ</u>

ವಾದಿಯು ಬೆಂಗಳೂರಿನ ನ್ಯಾಯಾಲಯದಲ್ಲಿ ಜಯ್ ಮಹಲ್ ನಲ್ಲಿರುವ ಮನೆಗೆ ಲಿಫ್ಟ್ ಅಳವಡಿಸುವ ಸಲುವಾಗಿ ದಾವಾ ಹಾಕಿದ್ದರು ಎಂದರೆ ನಿಜ. ಅದೇ ರೀತಿ 3 ನೇ ಪ್ರತಿವಾದಿರವರು ಬೆಂಗಳೂರಿನ ನ್ಯಾಯಾಲಯದಲ್ಲಿ ವಾದಿ ವಿರುದ್ಧ ಲಿಫ್ಟ್ ಅಳವಡಿಸುವ ಸಲುವಾಗಿ ದಾವಾ ಹಾಕಿದ್ದರು ಎಂದರೆ ಸಾಕ್ಷಿಯು ಮೊದಲೇ ಹಾಕಿದ್ದರು ಎಂದು ನುಡಿಯುತ್ತಾರೆ. ಈ ಎರಡೂ ದಾವಾಗಳಲ್ಲಿ ರಾಜಿ ಅರ್ಜಿ ಹಾಕಿ ರಾಜಿ ಆಗಿತ್ತು ಎಂದರೆ ನಿಜ. ಜಯ್ ಮಹಲ್ ನಲ್ಲಿರುವ ಮನೆಯಲ್ಲಿ ನಾನು 2 ನೇ ಅಂತಸ್ತಿನ ಮನೆಯಲ್ಲಿದ್ದೇನೆಂದರೆ ನಿಜ. ಈ ಮನೆಗೆ ಈಗ ಲಿಫ್ಟ್ ಅಳವಡಿಸಲಾಗಿದೆ ಮತ್ತು ನಾವು ಉಪಯೋಗಿಸುತ್ತಿದ್ದೇವೆ ಎಂದರೆ ನಿಜ. 2 ನೇ ಪ್ರತಿವಾದಿಯವರು ಜಯ್ ಮಹಲ್ ನಲ್ಲಿರುವ ಮನೆಯಲ್ಲಿ 1 ನೇ ಮಹಡಿಯಲ್ಲಿ 4 ನೇ ಪ್ರತಿವಾದಿಯವರ ಜೊತೆ ವಾಸವಿದ್ದಾರೆಂದರೆ ನಿಜ.

ನಂಬರ್ 62, 10 ನೇ ಮುಖ್ಯ ರಸ್ತೆ, ಹೆಚ್ ಎಂ ಟಿ ಲೇಔಟ್, ಆರ್ ಟಿ ನಗರ್ ಬೆಂಗಳೂರು ಈ ಆಸ್ತಿ ನನ್ನ ಮಾವನಾದ 1 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ನಿಜ. 1 ನೇ ಪ್ರತಿವಾದಿಯವರು ದಿಃ16.07.2020 ರಲ್ಲಿ ತೀರಿಕೊಂಡಿರುತ್ತಾರೆ. ಈ ಆಸ್ತಿಯನ್ನು 2010 ರಲ್ಲಿ 6th Energy Techonogies Company ಗೆ ಬಾಡಿಗೆಗೆ ಕೊಟ್ಟಿರುತ್ತಾರೆಂದರೆ ನಿಜ. ಈ ಕರಾರು 15 ವರ್ಷಕ್ಕೆ ಬಾಡಿಗೆ ಕರಾರು ಆಗಿದೆ. ತಿಂಗಳಿಗೆ ಬಾಡಿಗೆ 4,25,000/- ರೂಪಾಯಿ ಬರುತ್ತದೆ ಎಂದರೆ ನಿಜ. 1 ನೇ ಪ್ರತಿವಾದಿ ತೀರಿಕೊಂಡಾಗ ಬಾಡಿಗೆ 8,00,000/- ಬರುತ್ತಿತ್ತು ಎಂದರೆ ಸಾಕ್ಷಿಯು ನೋಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ಬಾಡಿಗೆದಾರ ಬಾಡಿಗೆ ಹಣವನ್ನು 1 ನೇ ಪ್ರತಿವಾದಿಯ ಹೆಚ್ ಡಿ ಎಫ್ ಸಿ ಬ್ಯಾಂಕ್ ಅಕೌಂಟ್ ಗೆ ಜಮಾ ಮಾಡುತ್ತಿದ್ದರು

ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯವರು ಈ ಬ್ಯಾಂಕ್ ಅಕೌಂಟ್ ಅನ್ನು ನಾನು ಮತ್ತು ನನ್ನ ಹೆಂಡತಿ ಚಲಾಯಿಸುತ್ತಿದ್ದೆವು ಎಂದರೆ ಸಾಕ್ಷಿಯು ಅದು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯವರು ಎಫ್ ಡಿ ಮಾಡಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಬಾಡಿಗೆ ಹಣದಲ್ಲಿ ಆರ್ ಡಿ ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯವರು ನನ್ನ ಮುಾಲಕ ಆನ್ ಲೈನ್ ಮುಖಾಂತರ ಹೆಚ್ ಡಿ ಎಫ್ ಸಿ ಬ್ಯಾಂಕ್ ಅಕೌಂಟ್ ನ ವ್ಯವಹಾರ ಮಾಡಿಸುತ್ತಿದ್ದರು ಎಂದರೆ ಸಾಕ್ಷಿಯು ಅದು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯವರ ಹೆಸರಿಗೆ ಕೆನರಾ ಬ್ಯಾಂಕ್ ನಂದಿ ದುರ್ಗದಲ್ಲಿ ಖಾತೆ ಇತ್ತು ಎಂದರೆ ಚಾಲ್ತಿ ಖಾತೆ ಇತ್ತು ಎಂದರೆ ಗೊತ್ತಿಲ್ಲ. ಜಿ ಎಸ್ ಟಿ ಕಟ್ಟುವ ಸಲುವಾಗಿ ಮೇಲಿನ ಅಕೌಂಟ್ ಅನ್ನು ತೆಗೆದಿದ್ದರು ಎಂದರೆ ಸಾಕ್ಷಿಯು ಮೊದಲಿನಿಂದಲೂ ಇತ್ತು ಎಂದು ನುಡಿಯುತ್ತಾರೆ. ಈ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಇತ್ತು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯವರ ಹೆಸರಿನಲ್ಲಿ ಕೆನರಾ ಬ್ಯಾಂಕ್ ನಂದಿ ದುರ್ಗದಲ್ಲಿ ಖಾತೆ ತೆರೆಯಲು 2018 ರಲ್ಲಿ ವಾದಿ ಮತ್ತು ನಾನು ಒತ್ತಾಯ ಮಾಡಿದೆವು ಎಂದರೆ ತಪ್ಪು. ಈ ಬ್ಯಾಂಕ್ ನಲ್ಲಿ ಜಂಟಿ ಖಾತೆಯಾಯಿತು ಎಂದರೆ ಸಾಕ್ಷಿಯು ಇತ್ತು ಎಂದು ಹೇಳುತ್ತಾರೆ. ಈ ಜಂಟಿ ಖಾತೆಯಲ್ಲಿ 1 ನೇ ಪ್ರತಿವಾದಿಗೆ ಗೊತ್ತಿಲ್ಲದೇ 2 ನೇ ಪ್ರತಿವಾದಿಯವರ ಹೆಸರಿನಲ್ಲಿ ನಾನು ಚಲಾವಣೆ ಮಾಡುತ್ತಿದ್ದೆ ಎಂದರೆ ಸುಳ್ಳು. ನಾನು, ವಾದಿ, ಮತ್ತು 2 ನೇ ಪ್ರತಿವಾದಿಯವರು ಹೆಚ್ ಡಿ ಎಫ್ ಸಿ ಬ್ಯಾಂಕಿನಲ್ಲಿದ್ದ ಹಣವನ್ನು ಕೆನರಾ ಬ್ಯಾಂಕಿಗೆ ವರ್ಗಾವಣೆ ಮಾಡಿದೆವು ಎಂದರೆ ಸಾಕ್ಷಿಯು 1 ಮತ್ತು 2 ನೇ ಪ್ರತಿವಾದಿಯವರು ಇಚ್ಚೆ ಪಟ್ಟಂತೆ ಆಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯವರಿಗೆ ಗೊತ್ತಿಲ್ಲದಂತೆ ನಾನು ಮತ್ತು ನನ್ನ ಹೆಂಡತಿ ನಾನೇ ಖಾತೆಯನ್ನು ಚಲಾವಣೆ ಮಾಡುತ್ತಿದ್ದೆವು ಎಂದರೆ ಸುಳ್ಳು. 2 ನೇ ಪ್ರತಿವಾದಿಯವರು ನನ್ನ ಹೆಂಡತಿಯ ಹೆಸರಿನಲ್ಲಿ ಎಫ್ ಡಿ ಮಾಡಿದ್ದಾರೆಂದರೆ ಸಾಕ್ಷಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯವರು ತೀರಿಕೊಂಡ ನಂತರ 2 ನೇ ಪ್ರತಿವಾದಿಯವರು ತನ್ನ ವಾದ ಮತ್ತು 4 ನೇ ಪ್ರತಿವಾದಿಗೆ ಸ್ವಇಚ್ಚೆಯಿಂದ ಹಣ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಇಬ್ಬರಿಗೂ ತಲಾ 70 ಲಕ್ಷ

ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. 3 ನೇ ಪ್ರತಿವಾದಿಗೆ ಹಣ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ವಾದಿ 2 ಕೋಟಿ 10,00,000/- ರೂಪಾಯಿಗಳನ್ನು ನಮ್ಮ ಅಕೌಂಟ್ ಗಳಿಗೆ ವರ್ಗಾವಣೆ ಮಾಡಿ ದುರುಪಯೋಗ ಪಡಿಸಿಕೊಂಡಿರುತ್ತೇವೆಂದರೆ ಸುಳ್ಳು. ವಾದಿಯು 6th Energy Techonogies Company ವಿರುದ್ಧ ಬಾಡಿಗೆಗಾಗಿ ದಾವಾ ಹಾಕಿದ್ದಾರೆಂದರೆ ಸಾಕ್ಷಿಯು 1/3 ನೇ ಭಾಗಕ್ಕಾಗಿ ಹಾಕಿರುತ್ತೇವೆಂದು ನುಡಿಯುತ್ತಾರೆ. ಅದರ ಸಂಖ್ಯೆ COM/OS/1809/2020-22 ಆಗಿರುತ್ತದೆ. ಈ ದಾವಾದಲ್ಲಿ ನಾನು ನನ್ನ ಹೆಂಡತಿಯ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸಿರುತ್ತೇನೆಂದರೆ ನಿಜ. ಈ ವಿಚಾರಣೆಯಲ್ಲಿ ಖಾತೆಗಳ ಬಗ್ಗೆ ಸಾಕ್ಷಿ ನುಡಿದಿದ್ದೇನೇಂದರೆ ಸುಳ್ಳು. 1 ನೇ ಪ್ರತಿವಾದಿಯವರು ಇಟ್ಟಿದ್ದ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡು ನಾನು ಮತ್ತು ನನ್ನ ಹೆಂಡತಿ ಆನ್ ಲೈನ್ ಮುಖಾಂತರ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೇವೇಂದರೆ ಸುಳ್ಳು. ವಾದಿ ಮತ್ತು 2 ಮತ್ತು 4 ನೇ ಪ್ರತಿವಾದಿ ಯವರು 3 ನೇ ಪ್ರತಿವಾದಿಗೆ 1/3 ಭಾಗ ಹಣ ಕೊಡಬೇಕಾಗುತ್ತದೆ ಎಂದರೆ ಸುಳ್ಳು. ಹಣ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.